<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ ಜೇವರ್ಗಿ</u>

<u>ಸಿಸಿ ನಂ. **18/2021**</u>

<u>**ಚಾಸಾ-1 /ಪಿಡಬ್ಲೂ-1**</u>

| | |
|---|---|
| **ಹೆಸರು** | ಅನೀಲ |
| **ತಂದೆ ಹೆಸರು** | ಚನ್ನು |
| **ವಯಸ್ಸು** | 27 ವರ್ಷಗಳು |
| **ಉದ್ಯೋಗ** | ಚಾಲಕ |
| **ವಾಸ ಸ್ಥಳ** | ಅಲ್ಲಾಪೂರ ತಾಂಡಾ |

<u>**ದಿನಾಂಕ 27-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**</u>

ಚಾಸಾ-4 ನನ್ನ ಅಣ್ಣ. ಚಾಸಾ-5 ರಿಂದ 10 ನನ್ನ ಸಂಬಂಧಿಕರು. ಆರೋಪಿತರು ನನ್ನ ಸಂಬಂಧಿಕರು.

ಒಂದು ವರ್ಷದ ಹಿಂದೆ ಬೆಳಿಗ್ಗೆ 11 - 12 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5 ರವರು ಶಾಲೆಯ ಹತ್ತಿರ ಹೋಗುತ್ತಿದ್ದಾಗ 1 ನೇ ಆರೋಪಿ ಚಾಸಾ-5 ರವರನ್ನು ಡಿಕ್ಕಿಹೊಡೆದು ಮಕ್ಕಳೆ ಬಿಡುವುದಿಲ್ಲ ಎಂದ. ನಂತರ ಇತರೆ ಆರೋಪಿಗಳು ಅಲ್ಲಿಯೇ ಇದ್ದು, ಅವರ ಪೈಕಿ 2 ನೇ ಆರೋಪಿ ಜಗಳ ಬಿಡಿಸಲು ಬಂದ ಚಾಸಾ-4 ರವರ ತಲೆಯ ಮೇಲೆ ಕಲ್ಲಿನಿಂದ ಹೊಡೆದ. 1 ನೇ ಆರೋಪಿಯ ಮನೆಯ ಹೆಣ್ಣುಮಕ್ಕಳು ಬಂದು ಇವರನ್ನು ಬಿಡಬೇಡಿರಿ ಖಲಾಸ್ ಮಾಡಿರಿ ಎಂದರು. 3 ನೇ ಆರೋಪಿ ಚಾಸಾ-4 ರವರ ಕುತ್ತಿಗೆ ಹಿಡಿದು ಹೊಡೆದಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ಹೋಗಿರುತ್ತೇವೆ. ಮರುದಿನ ಬೆಳಿಗ್ಗೆ 11ಃ30 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನಾನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿರುವುದರಿಂದ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಬಂದು ಪಂಚನಾಮೆ ಜರುಗಿಸಿರುತ್ತಾರೆ. ಪಂಚನಾಮೆ ಜರುಗಿಸಲು ಪೊಲೀಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ.

ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ಆ ದಿನ ಹಲ್ಲೆ ಮಾಡಲಾಗಿದೆ. ಸದರಿ ಕಲ್ಲನ್ನು ಮು.ಮಾ-1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅ.ರವರು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಸದಗಿ ಜಗಳ ದಿನಾಂಕ 16-09-2021 ರಂದು ಬೆಳಿಗ್ಗೆ 09ಃ30 ಗಂಟೆಗೆ ಆಗಿರುತ್ತದೆ ಎಂದರೆ ನಿಜ. 2 ನೇ ಆರೋಪಿ ಚಾಸಾ-5 ರವರಿಗೆ ಕಲ್ಲಿನಿಂದ ಹೊಡೆದರು ಎಂದರೆ ನಿಜ. 3 ನೇ ಆರೋಪಿ ಚಾಸಾ-4 ರವರನ್ನು ತಡೆದು ನಿಲ್ಲಿಸಿ ನೆಲಕ್ಕೆ ಕೆಡವಿದರು ಎಂದರೆ ನಿಜ. ಚಾಸಾ-7 ರಿಂದ 10 ರವರು ಜಗಳ ಬಿಡಿಸಿದರು ಎಂದರೆ ನಿಜ. ದಿನಾಂಕ 17-09-2021 ರಂದು ಸಂಜೆ 4 ರಿಂದ 5 ರವರೆಗೆ ಪಂಚನಾಮೆ ಜರುಗಿಸಲಾಯಿತು ಎಂದರೆ ನಿಜ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದೂರನ್ನು ಪೊಲೀಸ್ ಠಾಣೆಯಲ್ಲಿ ಬರೆದುಕೊಂಡಿರುತ್ತಾರೆ. ಪೊಲೀಸರು ಏನು ಬರೆದುಕೊಂಡರು ನನಗೆ ಹೇಳಿಲ್ಲ. ಸಂಗೀತಾ ಎಂಬುವವರು ನನಗೆ ಗೊತ್ತು. ಸದರಿ ಸಂಗೀತಾ ಆರೋಪಿತರಿಗೆ ಅತ್ತಿಗೆಯಾಗಬೇಕು. ಈ ಘಟನೆ ಆಗುವುದಕ್ಕೂ ಮೊದಲು ಸಂಗೀತಾ ಮತ್ತು ಚಾಸಾ-5 ರವರ ನಡುವೆ ಪ್ರೀತಿ ಆಗಿತ್ತು ಎಂದರೆ ಸರಿಯಲ್ಲ. ಚಾಸಾ-5 ರವರು ಸಂಗೀತಾರವರನ್ನು ಕೈ ಹಿಡಿದು ಎಳೆದಾಡಿ ಅವಮಾನ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಮ್ಮ ಊರಿನಲ್ಲಿ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ನಂತರ ನಾವು ನಮ್ಮ ತಾಂಡಾದ ಮಲ್ಲಣ್ಣಗೌಡರವರ ಹತ್ತಿರ ಹೋಗಿದ್ದೆವು ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಹೊಡೆದ ನಂತರ ನಾವು ಮಲ್ಲಣ್ಣಗೌಡರವರ ಹತ್ತಿರ ಹೋಗಿದ್ದೆವು. ಆರೋಪಿಗಳು ನನ್ನ ಅಣ್ಣನಿಗೆ ಬೈದಿಲ್ಲ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-5 ರವರಿಗೆ ಕಲ್ಲಿನಿಂದ ಹೊಡೆದ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-5 ರವರನ್ನು ಹೊಡೆಯುತ್ತಿದ್ದಾಗ ಚಾಸಾ-4 ರವರು ಬಿಡಿಸಲು ಬಂದಾಗ ಅವರಿಗೂ ಸಹ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರನ್ನು 3 ಮತ್ತು 4 ನೇ ಆರೋಪಿಗಳು ತಡೆದು , ನೆಲಕ್ಕೆ ಕೆಡವಿ ಹೊಡೆದರು ಎಂದರೆ ಸರಿಯಲ್ಲ. ಆರೋಪಿಗಳು ಜೀವ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-7 ನನ್ನ ಗೆಳೆಯ ಎಂದರೆ ನಿಜ. ಚಾಸಾ-8 ರವರು ಚಾಸಾ-7 ರವರ ಮಗ ಎಂದರೆ ನಿಜ. ಆರೋಪಿಗಳ ವಿರುದ್ಧ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ